ಶ್ರೀ ಎ.ಟಿ. ರಾಮಸ್ವಾಮಿ :— ಡಿಸಿಸಿ ಬ್ಯಾಂಕ್ ನೌಕರರು ಅನಿರ್ದಿಷ್ಟ ಮುಷ್ಕರ ಮಾಡುತ್ತಿದ್ದಾರೆ. ಬ್ಯಾಂಕಿನ ಕಾರ್ಯಚಟುವಟಿಕೆಗಳೆಲ್ಲಾ ಸ್ಥಗಿತಗೊಂಡು ಗ್ರಾಹಕರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಅದಕ್ಕೆ ಬೇರೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು :— ಸರ್ಕಾರಕ್ಕೆ ಇದೊಂದು ಸವಾಲು. ಯಾವಾಗ ಅವರ ಬೇಡಿಕೆಗಳು ನ್ಯಾಯಯುತವಲ್ಲವೆಂದು ಅವರಿಗೆ ಮನವರಿಕೆಯಾಗುತ್ತದೆ, ಆ ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಹೊಣೆ ಅವರ ಮೇಲೆ ಇರುತ್ತದೆ, ಅವರು ಅದನ್ನು ಮಾಡುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ :— ಬೇಗ ಅದು ಕಾರ್ಯಕಲಾಪ ಮಾಡುವಂತೆ ಕ್ರಮಕ್ಕಿಗೊಳ್ಳಲಿ.

ಅಧ್ಯಕ್ಷರು :— ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಎಸ್.ಎಸ್. ಪಾಟೀಲ್ :— ಖಂಡಿತವಾಗಿಯೂ ಆ ಕೆಲಸ ಮಾಡುತ್ತೇವೆ.

(ಈ) ಅಂಗನವಾಡಿಗಳಿಗೆ ಉರುವಲು ವೆಚ್ಚ ನೀಡುವ ಬಗ್ಗೆ.

ಶ್ರೀ ಕುಂಭಿ ಸುಂದರರಾವ್ :— ಮಾನ್ಯ ಅಧ್ಯಕ್ಷರೇ, ರಾಜ್ಯದ ನಗರ ಪ್ರದೇಶಗಳಲ್ಲಿ ಇರುವ ಅಂಗನವಾಡಿಗಳಿಗೆ ಉರುವಲು ವೆಚ್ಚ ಎಂದು ಕೊಡುವ ಪದ್ಧತಿ ಇಲ್ಲ. ಗ್ರಾಮಾಂತರಗಳಲ್ಲಿರುವ ಅಂಗನವಾಡಿಗೆ...

ಅಧ್ಯಕ್ಷರು :— ಮಾನ್ಯ ಕುಂಭಿ ಸುಂದರರಾವ್‌ರವರೇ, ಮಾನ್ಯ ಮಂತ್ರಿಗಳು ತಮ್ಮ ಆರೋಗ್ಯ ಸರಿಯಿಲ್ಲವೆಂದು ನನಗೆ ಪತ್ರ ಬರೆದಿದ್ದಾರೆ ಹಾಗೂ ವೈಯಕ್ತಿಕವಾಗಿ ನನಗೆ ಹೇಳಿ ಹೋಗಿದ್ದಾರೆ. ಅವರು ಕಳೆದ ನಾಲ್ಕು ದಿವಸಗಳಿಂದಲೂ ಕೂಡ ಬಂದಿಲ್ಲ. ಇವತ್ತು ಒಂದು ದಿವಸ ಬಂದು ಹೋದರು. ಈ ವಿಚಾರವನ್ನು ನಾಳೆ ತೆಗೆದುಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳ ಪತ್ರದ ಬಗ್ಗೆ ನನಗೆ ಮರೆತೇ ಹೋಗಿತ್ತು.

(ಉ) ಕಬ್ಬಿನ ಬೆಳೆ ಅನೆಗಳ ಹಾವಳಿಯಿಂದ ಹಾನಿಗೀಡಾಗಿರುವುದರ ಬಗ್ಗೆ.

ಶ್ರೀ ಡಿ.ಬಿ. ಇನಾಂದಾರ್ (ಕಿತ್ತೂರು) :— ಮಾನ್ಯ ಅಧ್ಯಕ್ಷರೇ, ಬೇರೆ ಕಡೆ ಇನ್ನಿತರ ರೀತಿಯ ಕಾಟಗಳಿದ್ದರೆ ನಮ್ಮಲ್ಲಿ ಕಬ್ಬಿನ ಬೆಳೆಗೆ ಆನೆಗಳ ಹಾವಳಿಯಿಂದ ತೊಂದರೆಯಾಗಿದೆ. ಆನೆಗಳು ಕಬ್ಬಿನ ಬೆಳೆಯನ್ನು ತಿಂದು ಹಾಳು ಮಾಡುತ್ತಿವೆ.

ಸುಮಾರು 41 ಆನೆಗಳು ಖಾನಾಪುರ ತಾಲ್ಲೂಕಿನಲ್ಲಿ ನಮ್ಮ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಗ್ರಾಮಗಳಲ್ಲಿ, ಕಬ್ಬಿನ ಬೆಳೆ ತಿಂದು ಹಾಳು ಮಾಡುತ್ತಿವೆ. ಕಳೆದ ಎರಡು ವರ್ಷಗಳಿಂದ ಈ ರೀತಿಯಾಗುತ್ತಿದೆ. ಹೋದ ವರ್ಷ ಗನ್ನೋಳ್ಳಿ ಎಂಬ ಒಂದು ಗ್ರಾಮದಲ್ಲಿ ಆನೆ ಇಬ್ಬರನ್ನು ಕೊಂದಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರಬಹುದು. ಈ ವರ್ಷ ಕೂಡ 41 ಆನೆಗಳು ಹಾವಳಿ ಮಾಡುತ್ತಿವೆ. ಅಲ್ಲಿರತಕ್ಕ ಜನರು ರಾತ್ರಿಯ ವೇಳೆಯಲ್ಲಿ ನೆಮ್ಮದಿಯಿಂದ. ನಿದ್ದೆ ಮಾಡದಂತಾಗಿದೆ. ಅಲ್ಲಿರತಕ್ಕ ರೈತರಿಗ ಬಹಳಷ್ಟು ಬೆಳೆ ಹಾನಿಯೂ ಕೂಡ ಆಗಿದೆ. ಹಾನಿಯಾಗಿರತಕ್ಕಂತಹ ರೈತರಿಗೆ ಪರಿಹಾರ ಕೊಡತಕ್ಕ ಕಾರ್ಯವನ್ನು ಸರ್ಕಾರ ಮಾಡಬೇಕು. ಹಾಗೂ ಮುಂದಿನ ವರ್ಷ ಆನೆಗಳ ಹಾವಳಿ ಮರುಕಳಿಸದಂತೆ ಕಂದಕ ತೋಡುವುದು ಇತ್ಯಾದಿಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಅರ್ಜಿಗಳು ಮತ್ತು ಚಿತ್ರಗಳನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಕಬ್ಬಿನ ಬೆಳೆ ನಾಶವಾದ ನಂತರ ಅಧಿಕಾರಿಗಳು ಹೋಗಿ ಅಲ್ಲಿ ಪರಿಶೀಲಿಸಿದರೆ ಅಲ್ಲೇನೂ ಡ್ಯಾಮೇಜ್ ಆಗಿಲ್ಲ ಎಂದು ಹೇಳುವಂತಹ ಪ್ರಸಂಗ ಬರುತ್ತದೆ. ಆದ್ದರಿಂದ ನಾಳೆಯೇ ಅಲ್ಲಿಗೆ ಅರಣ್ಯ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಶೀಘ್ರವಾಗಿ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಈಗಾಗಲೇ ಗಮನ ಹರಿಸಿದ್ದೇನೆ. ವನ್ಯಜೀವಿ ವಿಭಾಗದ ಮುಖ್ಯಸ್ಥರು ಯಾರು ಇದ್ದಾರೋ ಅವರನ್ನು ನಾನು ಬೆಳಿಗ್ಗೆ ಕರೆಸಿ, ಆ ಭಾಗದಲ್ಲಿ ಆನೆಗಳ ಹಾವಳಿಯಿಂದ ಏನು ನಷ್ಟವಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಲು ತಿಳಿಸಿದ್ದೇನೆ. ಅದು ಬಂದ ನಂತರ ನಾವು ಅದಕ್ಕೆ ಪರಿಹಾರ ಕೊಡಬೇಕಾಗುತ್ತದೆ. ಬೆಳಿಗ್ಗೆ ಮಾನ್ಯ ಜಿ.ಟಿ. ದೇವೇಗೌಡರೂ ಸಹಾ ಮೈಸೂರಿನಲ್ಲಿ ಆಗಿದ್ದಂತಹ ಹಾನಿ ಬಗ್ಗೆ ಪರಿಹಾರ ಕೇಳಲು ಬಂದಿದ್ದರು. ಅವರಿಗೂ ಕೂಡ ನಾನು ಅದನ್ನೇ ಹೇಳಿದೆ. ಮೊದಲು ನಮ್ಮಲ್ಲಿ ಹಣ ಇರಲಿಲ್ಲ. ನಾವು ಇದಕ್ಕಾಗಿ ಇಟ್ಟ ಹಣ ಸಾಕಾಗುವುದಿಲ್ಲ, ಏಕೆಂದರೆ ಯಾವ್ಯಾವ ಟೈಮ್ ನಲ್ಲಿ ಏನಾಗುತ್ತದೋ ಹೇಳುವುದಕ್ಕಾಗುವುದಿಲ್ಲ. ಈಗ ಸತ್ತವರಿಗೆ ಒಂದು ಲಕ್ಷ ರೂ.ಗಳ ಪರಿಹಾರ ನೀಡಬೇಕೆಂದು ಮಾಡಿದ್ದೇವೆ. ಆದ್ದರಿಂದ ಅದಕ್ಕಾಗಿ ಮೀಸಲಿಟ್ಟ ಹಣ ಕಡಿಮೆ ಇತ್ತು. ಮೊನ್ನೆ ನಾವು ಏನೋ ಪ್ರಯತ್ನ ಮಾಡಿ 26 ಲಕ್ಷ ರೂ. ಗಳನ್ನು ಈಗ ಪಡೆದುಕೊಂಡಿದ್ದೇವೆ. ಈಗ ಹಾನಿಯಾದ ಬಗ್ಗೆ ವರದಿ ತರಿಸಿ ಅವರಿಗೆ ಪರಿಹಾರ ಕೊಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಅಧ್ಯಕ್ಷರು :— ಮಾನ್ಯ ಅರಣ್ಯ ಸಚಿವರೇ, ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದರು. ಬೆಳೆ ಎಲ್ಲಾ ನಾಶವಾದ ಮೇಲೆ ನಿಮ್ಮ ಅಧಿಕಾರಿಗಳು ಅಲ್ಲಿಗೆ

ಹೋಗಿ ಇನ್ಸ್‌ಪೆಕ್ಷನ್ ಮಾಡಿ ಬಂದು ಅಲ್ಲಿ ಬೆಳೆಯೇ ಇಲ್ಲವೆಂದು ವರದಿ ಕೊಡುವಂತಹ ಸಂಭವ ಇರುತ್ತದೆ ಎಂದು ಅವರು ಹೇಳಿದರು. ಸಾಮಾನ್ಯವಾಗಿ ಇನಾಂದಾರ್ ರವರು ಆಗಾಗ್ಗೆ ಎದ್ದು ನಿಂತು ಅದೂ ಇದೂ ಮಾತನಾಡಲಿಕ್ಕೆ ಹೋಗುವುದಿಲ್ಲ. ಈ ರೀತಿ ಅಪರೂಪಕ್ಕೆ ಯಾವಾಗಲಾದರೂ ಒಂದು ಸಲ ಮಾತನಾಡಲಿಕ್ಕೆ ಅವಕಾಶ ಕೇಳುತ್ತಾರೆ. ಬಹಳ ಜವಾಬ್ದಾರಿಯಿಂದಲೇ ಅವರು ಈ ಮಾತನ್ನು ಹೇಳಿರುತ್ತಾರೆ. ಆದ್ದರಿಂದ ತಾವು ಕೂಡಲೇ ನಿಮ್ಮ ಅಧಿಕಾರಿಗಳಿಗೆ ನಾಳೆಯೇ ಸ್ಥಳಕ್ಕೆ ಹೋಗುವುದಕ್ಕೆ ಸೂಚನೆ ಕೊಡಿ.

ಶ್ರೀ ಡಿ. ಮಂಜುನಾಥ್ :— ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದಂತೆ ಮುಖ್ಯಸ್ಥರಿಗೆ ಇವತ್ತೇ ಅಲ್ಲಿ ಬೆಳೆ ಹಾನಿಯಾಗುವ ಬಗ್ಗೆ ವರದಿ ತರಿಸಲು ಹೇಳಿದ್ದೇನೆ. ಮಾಹಿತಿಯನ್ನು ತರಿಸಿಕೊಂಡು ಅವರಿಗೆ ಪರಿಹಾರ ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಒಂದು ಎಕರೆ ಕಬ್ಬು ನಾಶವಾದರೆ ರೈತರಿಗೆ ಅಪಾರವಾದ ಹಾನಿಯಾಗುತ್ತದೆ. ಅದಕ್ಕೆ ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ :— ಈಗಿರುವ ನಾರ್ಮ್ಸ್ ಪ್ರಕಾರ ಗರಿಷ್ಠ 12 ಸಾವಿರ ರೂ.ಗಳಿಗಿಂತ ಹೆಚ್ಚು ಕೊಡಲು ಸಾಧ್ಯವಿಲ್ಲ.

ಶ್ರೀ ಡಿ.ಬಿ. ಇನಾಂದಾರ್ :— ಒಂದು ಎಕರೆ ಕಬ್ಬಿನ ಬೆಳೆ ಹಾಳಾದರೆ ರೈತನಿಗೆ ಸುಮಾರು 40-50 ಸಾವಿರ ರೂ.ಗಳ ಹಾನಿಯಾಗುತ್ತದೆ. 12 ಸಾವಿರ ರೂ.ಗಳು ಕೊಟ್ಟರೆ ಅದು ಏನೇನೂ ಸಾಲುವುದಿಲ್ಲ.

ಶ್ರೀ ಡಿ. ಮಂಜುನಾಥ್ :— ಈಗಿನ ನಾರ್ಮ್ಸ್ ಪ್ರಕಾರ 12 ಸಾವಿರ ರೂ.ಗಳಿಗಿಂತ ಹೆಚ್ಚು ಕೊಡಬಾರದು ಎಂದು ಇದೆ. ತಾವು ಹೇಳಿದ್ದರ ಬಗ್ಗೆ ಪರಿಶೀಲನೆ ಮಾಡೋಣ.

(ಊ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಅಕ್ವಾಯ್ ಅನುದಾನ ಬಿಡುಗಡೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣ) :— ಹುಬ್ಬಳ್ಳಿ ಮಾನ್ಯ ಅಧ್ಯಕ್ಷರೇ, ನಮ್ಮ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸರ್ಕಾರದಿಂದ ಈ ವರ್ಷ ಏನೊಂದು ಅಕ್ವಾಯ್ ಅನುದಾನ ಬರಬೇಕಾಗಿತ್ತೋ ಅದರಲ್ಲಿ 12 ಕೋಟಿ ರೂ.ಗಳು ಇನ್ನೂ ಕೊಡುವುದು ಬಾಕಿ ಇದೆ. ಇದರ ಬಗ್ಗೆ ನಾವು ಬಹಳಷ್ಟು ಸಲ ಹೇಳಿಕೊಂಡು ಬಂದಿದ್ದೇವೆ. ಈ ಬಗ್ಗೆ ನಮ್ಮ ಉಸ್ತುವಾರಿ ಸಚಿವರಾದಂತಹ ಎಸ್.ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಇಲ್ಲಿನ ನಿಯೋಗದ ಜೊತೆಗೆ ಸಭೆ ನಡೆಸಲಾಯಿತು. ಈ ಸಭೆಗೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ಇಷ್ಟೊಂದು ಹಣ ಬಾಕಿ ಬರಬೇಕಾಗಿದೆ ಎಂದು